# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 730 |
| 2. | ಸದಸ್ಯರ ಹೆಸರು | : | ಶ್ರೀ ಶರವಣ.ಟಿ.ಎ (ವಿಧಾನಸಭೆಯಿಂದ ಚುನಾಯಿತರಾದವರು), |
| 3. | ಉತ್ತರಿಸಬೇಕಾದ ದಿನಾಂಕ | : | 10.03.2026 |
| 4. | ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳೆಷ್ಟು ಈ ಸಮಿತಿಗಳ ಒಟ್ಟು ವಾರ್ಷಿಕ ವಹಿವಾಟು ಎಷ್ಟು; ಇವುಗಳಿಂದ ಸರ್ಕಾರಕ್ಕೆ ಬರುವ ಆದಾಯವೆಷ್ಟು; | ರಾಜ್ಯದಲ್ಲಿ ಒಟ್ಟು 170 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಕಾರ್ಯನಿರ್ವಹಿಸುತ್ತಿವೆ.<br><br>ರಾಜ್ಯದಲ್ಲಿರುವ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಸಂಬಂಧಿಸಿದ ಒಟ್ಟು ವಾರ್ಷಿಕ ವಹಿವಾಟು 2024-25ನೇ ಸಾಲಿನಲ್ಲಿ ರೂ.82,60,694/- ಕೋಟಿಗಳು ಮತ್ತು 2025-2026ನೇ ಸಾಲಿನ ಜನವರಿ 2026ರ ಅಂತ್ಯಕ್ಕೆ ರೂ70,94,081/- ಕೋಟಿಗಳಾಗಿರುತ್ತದೆ.<br><br>ಮೇಲಿನ ವಹಿವಾಟಿನ ಮೇಲೆ 2024-25ನೇ ಸಾಲಿನಲ್ಲಿ ರೂ.498.40 ಕೋಟಿಗಳು ಮತ್ತು 2025-26ನೇ ಸಾಲಿನ ಜನವರಿ 2026ರ ಅಂತ್ಯಕ್ಕೆ ರೂ.476.65 ಕೋಟಿ ಮಾರುಕಟ್ಟೆ ಶುಲ್ಕದ ರೂಪದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಆದಾಯವಾಗಿರುತ್ತದೆ.<br><br>ಈ ಆದಾಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಮಾತ್ರ ಸೀಮಿತವಾಗಿದ್ದು, ಸರ್ಕಾರಕ್ಕೆ ಯಾವುದೇ ಆದಾಯ ಇರುವುದಿಲ್ಲ. |
| ಆ) | ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಪ್ರಾಂಗಣಗಳಲ್ಲಿ ಸ್ವಚ್ಛತೆ ಮೇಲುಸ್ತುವಾರಿ ಮಾಡುವವರು ಯಾರು; ನಿರ್ವಹಣೆಗೆ ವ್ಯಯಿಸು ತ್ತಿರುವ ಮೊತ್ತವೆಷ್ಟು; ಈ ಬಗ್ಗೆ ಸರ್ಕಾರದ ನಿಯಮವೇನು; | ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಪ್ರಾಂಗಣಗಳ ಸ್ವಚ್ಛತೆಯ ಮೇಲುಸ್ತುವಾರಿಯನ್ನು ಸಂಬಂಧಿಸಿದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ನಿರ್ವಹಿಸುತ್ತವೆ.<br><br>ಸರ್ಕಾರದ ಆದೇಶ ಸಂಖ್ಯೆ: ಸಿಓ/112/ಎಂಆರ್‌ಇ/2024, ದಿನಾಂಕ:16/09/2025 ರಲ್ಲಿ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ & ಅಭಿವೃದ್ಧಿ) ಅಧಿನಿಯಮ 1966ರ ಕಲಂ 65(2)ರ ಮೇರೆಗೆ ಅಧಿಸೂಚಿತ ಕೃಷಿ ಉತ್ಪನ್ನಗಳ ವಹಿವಾಟಿನ ಮೌಲ್ಯದ ಮೇಲೆ ಶೇ.0.60 ಪೈಸೆಯಂತೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಮಾರುಕಟ್ಟೆ ಶುಲ್ಕ ಮತ್ತು ಬಳಕೆದಾರರ ಶುಲ್ಕ ರೂಪದಲ್ಲಿ ಆಕರಿಸಲು ಅವಕಾಶ ಕಲ್ಪಿಸಿದ್ದು, ಅದರನ್ವಯ ಆಕರಣೆಯಾಗುವ ಮೊತ್ತದಲ್ಲಿ ಶೇ.0.41ರಷ್ಟು ಮೊತ್ತವನ್ನು ಪ್ರಾಂಗಣಗಳ ಮೂಲಭೂತ ಸೌಕರ್ಯ, ಪ್ರಾಂಗಣಗಳ ನಿರ್ವಹಣೆ ಮತ್ತು ಸಮಿತಿಯ ಆಡಳಿತ ವೆಚ್ಚಗಳನ್ನು ಭರಿಸಲು ಹಂಚಿಕೆ ಮಾಡಿರುತ್ತದೆ.<br><br>ಸದರಿ ಶೇ.0.41ರಷ್ಟು ಮೊತ್ತದಲ್ಲಿ ಶೇ.0.14 ರಷ್ಟು ಮೊತ್ತವನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಪ್ರಾಂಗಣದ ಭದ್ರತೆ & ಸ್ವಚ್ಛತೆ ಉದ್ದೇಶಕ್ಕಾಗಿ ಭರಿಸುತ್ತವೆ. |

| | | |
|---|---|---|
| ಇ) | ರಾಜ್ಯದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಅಂಗಡಿಗಳನ್ನು ಹರಾಜು ಮಾಡುವ ಪ್ರಕ್ರಿಯೆಯ ಸಂಪೂರ್ಣ ವಿವರ ನೀಡುವುದು; ರಾಜ್ಯದ ಎಷ್ಟು ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಅಂಗಡಿಗಳ ಹರಾಜು ಮಾಡಲು ಬಾಕಿ ಇವೆ; ಬಾಕಿಗೆ ಕಾರಣಗಳೇನು; | ರಾಜ್ಯದಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣದಲ್ಲಿನ ಅಂಗಡಿಗಳನ್ನು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಗಳು, 2004 ರನ್ವಯ ಈ ಕೆಳಕಂಡಂತೆ ಹಂಚಿಕೆಗೆ ಕ್ರಮವಹಿಸಲಾಗುತ್ತಿದೆ.<br><br>ಪ್ರಾಂಗಣದಲ್ಲಿನ ಕಟ್ಟಡಗಳನ್ನು ಪೇಟೆಕಾರ್ಯಕರ್ತರಿಗೆ ನಿಯಮ-13 ರನ್ವಯ ಲೀವ್ ಅಂಡ್ ಲೈಸೆನ್ಸ್ ಆಧಾರದ ಮೇಲೆ ನಿಯಮಾನುಸಾರ ಹಂಚಿಕೆಗೆ ಕ್ರಮವಹಿಸಲಾಗುತ್ತಿದೆ.<br><br>ವಾಣಿಜ್ಯ ಸ್ವರೂಪದ ಚಿಕ್ಕ ಮಳಿಗೆಗಳನ್ನು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಗಳು, 2004 ರನ್ವಯ ನಿಯಮ-14 ರಡಿ ಗರಿಷ್ಟ 55 ತಿಂಗಳಿಗೆ ಹಂಚಿಕೆಗೆ ಮಂಜೂರಾತಿ ನೀಡಲಾಗುತ್ತಿದೆ. ಸದರಿ ನಿಯಮದಡಿ ಹಂಚಿಕೆ ಪಡೆದ ಕಟ್ಟಡಗಳನ್ನು ಮುಂದುವರೆಸಲು ನಿಯಮಗಳಲ್ಲಿ ಅವಕಾಶ ವಿರುವುದಿಲ್ಲ. ಸದರಿ ಚಿಕ್ಕಮಳಿಗೆಗಳ 55 ತಿಂಗಳ ಹಂಚಿಕೆ ಅವಧಿ ಮುಕ್ತಾಯವಾದ ನಂತರ ಹೊಸದಾಗಿ ಟೆಂಡರ್ ಕರೆದು ಹಂಚಿಕೆಗೆ ನಿಯಮಾನುಸಾರ ಕ್ರಮವಹಿಸಲಾಗುತ್ತಿದೆ.<br><br>ರಾಜ್ಯದಲ್ಲಿ ಒಟ್ಟು 170 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿದ್ದು, ಅದರಲ್ಲಿ ಅಂಗಡಿಗಳ ಹಂಚಿಕೆ ಅವಧಿಯ 55 ತಿಂಗಳ ನಂತರ ಮತ್ತೊಮ್ಮೆ ಟೆಂಡರ್ ಕರೆದು ಕ್ರಮವಹಿಸುವುದು ನಿರಂತರ ಪ್ರಕ್ರಿಯೆ ಯಾಗಿರುತ್ತದೆ. ಆದಕಾರಣ ಪ್ರಸ್ತುತ 141 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಅಂಗಡಿಗಳು ಹರಾಜು ಮಾಡಲು ಬಾಕಿಯಿದ್ದು, ಸಮಿತಿಗಳಿಂದ ಕ್ರಮವಹಿಸ ಲಾಗುತ್ತಿದೆ.<br><br>ರಾಜ್ಯದ ಮಾರುಕಟ್ಟೆ ಸಮಿತಿಗಳ ವಾಣಿಜ್ಯ ಸ್ವರೂಪದ ಚಿಕ್ಕ ಮಳಿಗೆಗಳನ್ನು 55 ತಿಂಗಳ ಹಂಚಿಕೆ ಅವಧಿ ಮುಕ್ತಾಯವಾದ ನಂತರ ಮುಂದುವರೆಸಲು ಅವಕಾಶವಿರುವುದಿಲ್ಲ. ಸದರಿ ಅಂಗಡಿಗಳನ್ನು ಹೊಸದಾಗಿ ಟೆಂಡರ್ ಕರೆದು ಹಂಚಿಕೆಗೆ ಬೇಡಿಕೆ ಅನುಸಾರ ಕ್ರಮವಹಿಸಲಾಗುತ್ತಿರುವುದರಿಂದ ಬಾಕಿ ಉಳಿಯುವುದಿಲ್ಲ. |
| ಈ) | ಮಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣ ಅಭಿವೃದ್ಧಿ ಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದಲ್ಲಿ, ಅಭಿವೃದ್ಧಿ ಯಾಗದಿರಲು ಕಾರಣಗಳೇನು; ಯಾವ ಕಾಲ ಮಿತಿಯಲ್ಲಿ ಅಭಿವೃದ್ಧಿ ಮಾಡಲಾಗುವುದು? | ಮಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣವನ್ನು ಸುಮಾರು ರೂ.20.00 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದ್ದು, ಸದರಿ ಪ್ರಾಂಗಣದಲ್ಲಿ ಅಗತ್ಯವಾದ ಮೂಲಭೂತ ಸೌಕರ್ಯ, ಗೋದಾಮುಗಳು ಮತ್ತು ಮಾರುಕಟ್ಟೆ ಚಟುವಟಿಕೆಗಳಿಗೆ ಪೂರಕವಾದ ಸೌಲಭ್ಯಗಳನ್ನು ಒದಗಿಸಲಾಗಿರುತ್ತದೆ. |

**ಸಂಖ್ಯೆ: ಸಿಒ 78 ಎಂಆರ್‌ಇ 2026**

**(ಶಿವಾನಂದ ಎಸ್. ಪಾಟೀಲ)**
**ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ**
**ಹಾಗೂ ಕೃಷಿ ಮಾರುಕಟ್ಟೆ ಸಚಿವರು**